ಸಮಸ್ಯೆಯಾಗಿತ್ತು. ಮೈಸೂರಿನಲ್ಲಿ ಉಪನ್ಯಾಸಕರಾಗಿದ್ದ ಜಿ.ವಿ ಇಲ್ಲಿ ಹೈಸ್ಕೂಲ್ ಮೇಷ್ಟ್ರಾದರು. ತಿಂಗಳಿಗೆ 40 ರೂಪಾಯಿ ಸಂಬಳ. ಈ ಸವಾಲನ್ನು ಲಕ್ಷ್ಮಿ ಎದುರಿಸಿದರು. ಆಗಲೇ ಇಬ್ಬರು ಮಕ್ಕಳು ಹುಟ್ಟಿದರು. ಪರಿಸ್ಥಿತಿ ಸುಧಾರಿಸಿತು ಎನ್ನುವಾಗ ತಮ್ಮಂದಿರು, ಭಾವ ಮೈದುನರು, ಹತ್ತಿರದ ಬಂಧುಗಳು ಎಲ್ಲರೂ ಇವರ ಮನೆಗೆ ಓದಲು ಬಂದರು. ಅದೇ ಸಂಬಳದಲ್ಲಿ ಈಗ ದೊಡ್ಡ ಕುಟುಂಬ ನಡೆಸಬೇಕು. ಇಲ್ಲಿಯೂ ಲಕ್ಷ್ಮಿ ಗೆದ್ದರು.

1973ರಲ್ಲಿ ಜಿ.ವಿಯವರು ನಿವೃತ್ತರಾದಾಗ ಅವರ ಶಿಷ್ಯರೆಲ್ಲರೂ ಸೇರಿ ರವಿಂದ್ರ ಕಲಾಕ್ಷೇತ್ರದಲ್ಲಿ ದೊಡ್ಡ ಕಾರ್ಯಕ್ರಮವನ್ನು ಏರ್ಪಡಿಸಿದ್ದರು. ಮಾಸ್ತಿ, ಗೋಕಾಕ್, ವಿ.ಸೀ, ರಾಳ್ಳಪಳ್ಳಿ ಅನಂತ ಕೃಷ್ಣಶರ್ಮ, ಜಿ. ನಾರಾಯಣ ಅಂದಿನ ಮುಖ್ಯ ಅತಿಥಿಗಳು. ಆ ಸಭೆಯಲ್ಲಿ ಜಿ.ವಿ ಹೇಳಿದರು, ‘ನನ್ನ ಜೀವನದಲ್ಲಿ ನಾನು ಏನಾದರೂ ಸಾಧನೆ ಮಾಡಿದ್ದರೆ ಅದಕ್ಕೆ ಮುಖ್ಯ ಕಾರಣ ನನ್ನ ಪತ್ನಿ ಲಕ್ಷ್ಮಿ.

